ಕ್ರ.ಸಂ.	ಜಿಲ್ಲೆಯ ಹೆಸರು	ಆವರ್ತಕ	ಅನಾವರ್ತಕ	ಉಡಳಿತ ವೆಚ್ಚ
6.	ಬೀದರ್	15913800	15913800	3536400
7.	ಹಾವೇರಿ	16097985	16097985	3577330
8.	ಮೈಸೂರು	21785895	21785895	4841310
9.	ಉತ್ತರ ಕನ್ನಡ	14869575	14869575	3304350
10.	ದಕ್ಷಿಣ ಕನ್ನಡ	13665713	13665713	3036825
11.	ಉಡುಪಿ	20909031	20909031	4646451
12.	ಬಳ್ಳಾರಿ	4500000	4500000	1000000
13.	ಮಂಡ್ಯ	15705188	15705188	3490042
14.	ಶಿವಮೊಗ್ಗ	9643219	9643219	2142938
15.	ಕೊಡಗು	10943825	10943825	1099350
16.	ರಾಯಚೂರು	4715944	4715944	1097988
17.	ಬಿಜಾಪುರ	7784438	7784438	1729875
18.	ಚಿಕ್ಕಮಗಳೂರು	3561019	3561019	791338
19.	ಚಾಮರಾಜನಗರ	6737063	6737063	1497125
20.	ಬೆಂಗಳೂರು ಸಿಟಿ ಸಾಕ್ಷರತಾ ಸಮಿತಿ	22028400	22028400	4895200
21.	ಬೆಂಗಳೂರು ಗ್ರಾಮಾಂತರ	11709113	11709113	2602025
22.	ಬೆಂಗಳೂರು ನಗರ	15526238	15526238	3450275
23.	ಕೋಲಾರ	10198980	10198980	2266440
24.	ಧಾರವಾಡ	6802313	6802313	1511625
25.	ಗದಗ	12319200	12319200	2737600
	ಒಟ್ಟು	318000053	318000053	70666678

1178 (771) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ಪದೋನ್ನತಿ ಹೊಂದಲು ಗ್ರಂಥಾಲಯ ಇಲಾಖೆಯಲ್ಲಿ ಅರ್ಹತೆ ಹೊಂದಿರುವ ಸಿಬ್ಬಂದಿ ಎಷ್ಟು ;

ಆ) ಅವರಿಗೆ ಪದೋನ್ನತಿ ನೀಡಲು ಆಗಿರುವ ವಿಳಂಬದ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು :

ಇ) ಅರ್ಹರಿಗೆ ಪದೋನ್ನತಿ ನೀಡಿ ನ್ಯಾಯ ಒದಗಿಸಲು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಲಿಂಗರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ಬಡ್ತಿ ಹೊಂದಲು 46 ಸಿಬ್ಬಂದಿ ಅರ್ಹರಿರುವರು.

ಆ) 28 ಗ್ರಂಥಪಾಲಕರಿಗೆ ಮುಖ್ಯ ಗ್ರಂಥಾಲಯಾಧಿಕಾರಿಗಳಾಗಿ ಪದೋನ್ನತಿ ನೀಡಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

1179 (772) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯು ನಿರೀಕ್ಷಿತ ಪ್ರಮಾಣದಲ್ಲಿ ಗುರಿ ಮುಟ್ಟಿದೆಯೇ ;

ಆ) ಇಲ್ಲದಿದ್ದಲ್ಲಿ ಕಾರಣಗಳೇನು ;

ಇ) ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ?

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಗುರಿ ಮುಟ್ಟಿದೆ.

ಆ) ಉದ್ಭವಿಸುವುದಿಲ್ಲ.

ಇ) ಕಾರ್ಯಹಂಚಿಕೆ ನಕ್ಷೆಯನ್ನು ಜಾರಿಗೆ ತರುವ ಮುಖಾಂತರ ಅನುದಾನ, ಅಧಿಕಾರ ಹಾಗೂ ಪ್ರಕಾರ್ಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ.

1180 (773) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಪ್ರತಿ ಸಾವಿರ ಪುರುಷ ಸಂಖ್ಯೆಗೆ 10 ವರ್ಷಗಳ ಹಿಂದೆ ಮತ್ತು ಈಗ ಇರುವ ಮಹಿಳೆಯರ ಸಂಖ್ಯೆ ಎಷ್ಟು ;

ಆ) ಲಿಂಗ ಪತ್ತೆ ಉಪಕರಣಗಳ ಬಳಕೆ ನಿಷೇಧದ ಬಗ್ಗೆ ಸರ್ಕಾರದ ಕ್ರಮಗಳೇನು ?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1991 ಜನಗಣತಿ ಪ್ರಕಾರ ಸ್ತ್ರೀಯರ ಸಂಖ್ಯೆ: 960.

2001ರ ಜನಗಣತಿ ಪ್ರಕಾರ ಸ್ತ್ರೀಯರ ಸಂಖ್ಯೆ: 964.

ಆ) ಗರ್ಭಪೂರ್ವ ಮತ್ತು ಪ್ರಸವಾಪೂರ್ವ ಭ್ರೂಣ ಹತ್ಯೆ ನಿಷೇಧ – ದುರ್ಬಳಕೆ ನಿಷೇಧ ಕಾಯ್ದೆ 1994 ಪ್ರಕಾರ.

ಅಲ್ಟಾಸೌಂಡ್ ಸ್ಕ್ಯಾನಿಂಗ್ ಉಪಕರಣಗಳನ್ನು ಬಳಸಲು ಲೈಸೆನ್ಸ್‌ನ್ನು ನೀಡಲಾಗುತ್ತಿದೆ. ಈ ಉಪಕರಣಗಳನ್ನು ಉಪಯೋಗಿಸುತ್ತಿರುವ ಜಿಲ್ಲೆಗಳಲ್ಲಿ ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಆಗಾಗ ಭೇಟಿ ನೀಡಿ, ತನಿಖೆ ನಡೆಸಿ, ಅಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ಆಸ್ಪತ್ರೆಗಳು ಭ್ರೂಣಲಿಂಗ ಪತ್ತೆ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಖಾತರಿ ಮಾಡಿಕೊಳ್ಳುವುದಲ್ಲದೆ, ಇದರಲ್ಲಿ ಯಾವುದೇ ಆಸ್ಪತ್ರೆಗಳು ಈ ರೀತಿಯ ಕಾನೂನು ಬಾಹಿರವಾಗಿ ಉಪಕರಣಗಳನ್ನು ದುರುಪಯೋಗಿಸಿದ್ದೇ ಆದಲ್ಲಿ ಅಂತಹ ಆಸ್ಪತ್ರೆಗಳ ನೋಂದಣಿಯನ್ನು ರದ್ದುಪಡಿಸಿ, ಉಪಕರಣಗಳನ್ನು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ದಾಖಲು ಪಡಿಸಲಾಗುತ್ತದೆ. ಈ ಕಾಯಿದೆಯನ್ನು ಉಲ್ಲಂಘಿಸಿರುವ 36 ಪ್ರಕರಣಗಳನ್ನು ದಾಖಲಿಸಿದ್ದು, ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ.